**ದಿನಾಂಕ: 21-11-2020ರಂದು ಸೋಮವಾರ ಬೆಳಗ್ಗೆ 10:00 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ M.E.G ಬಡವಣೆಯಲ್ಲಿರುವ ವಿವಿದೊದ್ದೇಶ ಕಟ್ಟಡದ ಸಭಾಂಗಣದಲ್ಲಿ ಶ್ರೀ.ಹನುಮಂತನಾಯ್ಕ ಟಿ,ತೋಟಗಾರಿಕೆ ಅಧಿಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ವಿಜಯ ಕುಮಾರ್ .ಎ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ |
| 2. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 3. | ಶ್ರೀ. ರಾಘವೇಂದ್ರ ಕೆ.ವಿ, ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀಮತಿ.ಅಮೃತನಾಯ್ಕ್, ಕಂದಾಯ ಪರಿವೀಕ್ಷಕರು |
| 5. | ನಿವಾಸಿ ಕ್ಷೇಮಾಭಿವೃದ್ದಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಪೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀ.ನಾರಾಯಣಗೌಡ ಮೊ:9886029103 ತಲಕಾವೇರಿ ಬಡಾವಣೆಯ ಹಿರಿಯ ನಾಗರೀಕರು ಮಾತನಾಡಿ ಬೃಹತ್ ನೀರುಗಾಲುವೆ ವಿಭಾಗದಿಂದ ರಾಜಕಾಲವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ವೈಜ್ಞಾನಿಕವಾಗಿ ಹಾಗು ತಾಂತ್ರಿಕವಾಗಿ ಅಡ್ಡರಸ್ತೆಗಳನ್ನು ರಾಜಕಾಲುವೆಗೆ ಸಂಪರ್ಕಿಸದೆ ಕಾಮಗಾರಿ ಮುಂದುವರಿಸುತ್ತಿದ್ದು ಸಾರ್ವಜನಿಕರಿಗೆ ಮತ್ತೊಮ್ಮೆ ತೊಂದರೆಯಾಗುವ ಸಂಭವವಿರುವುದರಿಂದ ರಾಜಕಾಲುವೆ ಅಧಿಕಾರಿಗಳು ಈ ಬಗ್ಗೆ ಕೂಡಲೇ ಗಮನಹರಿಸಿ ಸರಿಪಡಿಸಿಕೊಡಬೇಕೆಂದು ಕೋರಿದರು.

ರಾಜಕಾಲುವೆಗಳಲ್ಲಿ ಮನೆಗಳ ಒಳಚರಂಡಿ ತ್ಯಾಜ್ಯವನ್ನು ಬಿಡುತ್ತಿದ್ದು ಕೆರೆಗೆ ಹೋಗುತ್ತಿರುವುದನ್ನು ತಡೆಯಬೇಕೆಂದು ಕೋರಿದರು. ಈ ಬಗ್ಗೆ ಸಭೆಯಲ್ಲಿದ್ದ ಅಧಿಕಾರಿಗಳು ತ್ಯಾಜ್ಯ ಸಂಸ್ಕರಣ ಘಟಕವನ್ನು ಸ್ಥಾಪಿಸಲು ಮೂರು ಬಾರಿ ಟೆಂಡರ್ ಅಹ್ವಾನಿಸಿದ್ದು ಯಾವ ಒಬ್ಬ ಗುತ್ತಿಗೆದಾರರು ಟೆಂಡರಲ್ಲಿ ಭಾಗವಹಿಸದೆ ಇರುವುದನ್ನು ಕೆರೆ ಅಧಿಕಾರಿಗಳು ನೀಡಿದ ಮಾಹಿತಿಯನ್ನು ಸಭೆಯಲ್ಲಿ ತಿಳಿಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೋಟ್ಯಾಂತರ ರೂಪಾಯಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ಸಾರ್ವಜನಿಕರಿಗೆ ಪ್ರತಿ ಕಾಮಗಾರಿಯ ಅಂದಾಜು ಮೊತ್ತ, ಕಾಮಗಾರಿಯ ವಿವರ, ಗುತ್ತಿಗೆದಾರರ ವಿವರ, ಅನುಷ್ಠಾನ ಅಧಿಕಾರಿಗಳ ವಿವರಗಳನ್ನೊಳಗೊಂಡ ಫಲಕವನ್ನು ಪ್ರತಿ ಕಾಮಗಾರಿಯ ಸ್ಥಳದಲ್ಲಿ ಅಳವಡಿಸುವಂತೆ ಕೋರಿದರು.

ಕ್ರಮ:ಸ.ಕಾ.ಅ,ಬೃ,ನೀ,ಗಾ ವಿಭಾಗ,
ಬಿ.ಡಬ್ಲ್ಯೂ.ಎಸ್.ಬಿ,ಕೆರೆಗಳು ಮತ್ತು ವಾರ್ಡ್ ಅಭಿಯಂತರರು



Scanned with CamScanner

ವಿಜ್ಞಾನ ನಗರ ನಿವಾಸಿಯಾದ ಶ್ರೀ.ಮನೋಜ್ ಕುಮಾರ್ ಮೊ:9845316328, ರವರು ಮತನಾಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ವಾರ್ಡ್‌ನಲ್ಲಿ ಕೈಗೊಂಡಿದ್ದು ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡ ಕಾಮಗಾರಿಗಳ ವಿವರಗಳನ್ನು ಒದಗಿಸುವಂತೆ ಕೋರಿದರು.

ವೀರಭದ್ರನಗರ ಮುಖ್ಯ ರಸ್ತೆಯಲ್ಲಿ ಎರಡು ವರ್ಷಗಳ ಹಿಂದೆ ಕಾಮಗಾರಿ ಕೈಗೊಂಡು ಇಕ್ಕೆಲಗಳಲ್ಲಿ ಆರ್.ಸಿ.ಸಿ ಚರಂಡಿಯನ್ನು ಮಾತ್ರ ಅಭಿವೃದ್ಧಿ ಪಡಿಸಿದ್ದು ರಸ್ತೆಯ ಮೇಲ್ಮೈನ್ನು ಅಭಿವೃದ್ಧಿ ಪಡಿಸಿದೆ ಇರುವುದರ ಬಗೆ ಆಕ್ಷೇಪ ವ್ಯಕ್ತ ಪಡಿಸಿ ಕಾಮಗಾರಿಯ ವಿವರಗಳನ್ನು ನೀಡುವಂತೆ ಕೋರಿದರು. ಈ ಬಗ್ಗೆ ಸಭೆಯಲ್ಲಿ ಪೂರ್ಣಗೊಂಡ ಕಾಮಗಾರಿಗಳ ವಿವರಗಳನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಎಂದು ಅಧಿಕಾರಿಗಳು ತಿಳಿಸದರು.

ಬಸವನಗರ ಮುಖ್ಯ ರಸ್ತೆಯಲ್ಲಿ ಗ್ಯಾಸ್ ಬಂಕ್ ಸ್ಥಾಪನೆಯಾಗುತ್ತಿದ್ದು ಈ ಜಾಗವು ರಾಜಕಾಲುವೆ ಪ್ರದೇಶವಾಗಿದ್ದು ಸದರಿ ನಿರ್ಮಾಣವನ್ನು ಕೂಡಲೇ ತಡೆ ಹಿಡಿಯಬೇಕೆಂದು ಕೋರಿದರು.

ಕ್ರಮ:ಸ.ಕಾ.ಅ,ಬೃ,ನೀ,ಗಾ ವಿಭಾಗ,
ವಾರ್ಡ್ ಅಭಿಯಂತರರು

ತಲಕಾವೇರಿ ಬಡಾವಣೆ ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಶ್ರೀಮತಿ.ಸತ್ಯಾವಾಣಿ ಮೊ:9964454083 ಮತ್ತು ಶ್ರೀ.ಶ್ರೀದರ್ ಮೊ:9844173098, ರವರು ಫುಟ್‌ಪಾತ್ ಮೇಲಿರುವ ಅಂಗಡಿಗಳನ್ನು ಅಗಿಂದಾಗ್ಗೆ ತೆರುವುಗೊಳಿಸುವಂತೆ ಹಾಗೂ ತಲಕಾವೇರಿ ಬಡಾವಣೆಯ ಪಾರ್ಕ್ ಮತ್ತು ಖಾಲಿ ನಿವೇಶನಗಳಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಹಾಕಿಕೊಂಡು ನೈರ್ಮಲ್ಯ ಕಾಪಾಡದೆ ಸಾರ್ವಜನಿಕರಿಗೆ ಪದೇ ಪದೇ ತೊಂದರೆಯಾಗುತ್ತಿರುವ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿರುವುದಿಲ್ಲವೆಂದು ಅಧ್ಯಕ್ಷರ ಗಮನಕ್ಕೆ ತಂದರು. ಅಧ್ಯಕ್ಷರು ಈ ವಾರದಲ್ಲಿ ಸ್ವತಹಃ ಅದಿಕಾರಿಗಳೊಂದಿಗೆ ಖುದ್ದು ಪರಿಶೀಲಿಸಿ ಸರಿಪಡಿಸಿಕೊಡುವುದಾಗಿ ಬರವಸೆ ನೀಡಿದರು. ಪ್ರತಿ ಮನೆಯಲ್ಲಿ ಹಸಿ ಕಸವನ್ನು ಕಂಪೋಸ್ಟಿಂಗ್ ಮಾಡಲು ಸಾರ್ವಜನಿಕರಿಗೆ ತರಬೇತಿ ನೀಡಲು ಒಂದು ದಿನ ಕಛೇರಿಯಲ್ಲಿ ಅವಕಾಶ ಮಾಡಿಕೊಡುವಂತೆ ಕೋರಿದರು. ತಲಕಾವೇರಿ ಬಡಾವಣೆಯಲ್ಲಿರುವ ಕಲ್ಯಾಣ ಶಾಖೆಯ ಹೊಲಿಗೆ ಯಂತ್ರ ತರಬೇತಿ ಕಟ್ಟಡವನ್ನು ಹಿರಿಯ ನಾಗರೀಕರಿಗೆ ನೀಡಿರುವುದನ್ನು ಕೂಡಲೇ ರದ್ದುಗೊಳಿಸಿ ಮಹಿಳೆಯರಿಗೆ ಕೊಡಬೇಕೆಂದು ಕೋರಿದರು.

ಬಸವನಗರ ನಿಲ್ದಾಣದಲ್ಲಿ ಮತ್ತು ವಿಜ್ಞಾನನಗರ ಮುಖ್ಯ ರಸ್ತೆಯಲ್ಲಿ ಪಾರ್ಕಿಂಗ್ ನಿಯಮಗಳನ್ನು ಪಾಲಿಸಲು ಲೇನ್ ಮಾರ್ಕಿಂಗ್‌ನ್ನು ಮಾಡಿಸಿ, ಕ್ರಮವಾಗಿ ವಾಹನಗಳನ್ನು ನಿಲ್ಲಿಸಲು ಕ್ರಮಕೈಗೊಳ್ಳುವಂತೆ ಕೋರಿದರು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು,ಸಂಚಾರ ವಿಭಾಗ,
ಕಲ್ಯಾಣ ಶಾಖೆ ಮತ್ತು ವಾರ್ಡ್ ಅಭಿಯಂತರರು

ಶ್ರೀ.ವಿಶ್ವನಾಥ ಹೆರಳೆ ಮೊ:9902918559 ರವರು ಮಾತನಾಡಿ ವಿಜ್ಞಾನನಗರ ಮುಖ್ಯ ರಸ್ತೆ ಮತ್ತು ಬಸವನಗರ ಮುಖ್ಯ ರಸ್ತೆಯಲ್ಲಿ ಶೆಲ್ ಪೆಟ್ರೋಲ್ ಬಾಂಕ್ ಮುಂಬಾಗ ಚರಂಡಿಯನ್ನು ನಿರ್ಮಿಸಿಕೊಡುವಂತೆ ಕೋರಿದರು ಹಾಗೂ ವಿಜ್ಞಾನನಗರ ಕೆಲವುಬಾಗಗಳಲ್ಲಿ ಈಗಾಗಲೇ ವಾರ್ಡ್ ಅಭಿಯಂತರರೊಂದಿಗೆ ಪರಿವೀಕ್ಷಣೆ ಮಾಡಿದ್ದು ಅವಶ್ಯವಿರುವ ಕಡೆ ಆರ್.ಸಿ.ಸಿ ಚರಂಡಿ ರಸ್ತೆ ಹಾಗೂ ಮೋರಿಗಳನ್ನು ನಿರ್ಮಿಸಿಕೊಡುವಂತೆ ಕೋರಿದರು.

ಕ್ರಮ:ಸ.ಕಾ.ಅ,ರಸ್ತೆ ಮೂ.ಭೂ.ಸೌ ವಿಭಾಗ,
ವಾರ್ಡ್ ಅಭಿಯಂತರರು



Scanned with CamScanner

ಶ್ರೀ.ಗಿರೀಶ್ ಮತ್ತು ಶ್ರೀ.ಗಣೇಶ್ ರವರು ಬಿ.ಡಬ್ಲ್ಯೂ.ಎಸ್.ಬಿ ಕೊಳವೆ ನೀರಿನಲ್ಲಿ ಮಾಲಿನ್ಯವಿದ್ದು ಸರಿಪಡಿಸಿಕೊಡಲು ಕೋರಿದರು. ವಿಜ್ಞಾನನಗರದ ಆರ್.ಕೆ.ಅಪಾರ್ಟಮೆಂಟ್ ಹತ್ತಿರ ರಸ್ತೆಯನ್ನು ಟ್ಯಾಂಕರ್‌ಗಳು ಅತಿ ಕ್ರಮಿಸಿದ್ದು ಕೂಡಲೇ ತೆರವಗೊಳಿಸುವಂತೆ ಕೋರಿದರು.

ಕ್ರಮ:ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಬಿ.

ಡಾ॥ ಕಿರುಬಾಕರನ್ ಮೊ.ಸಂ.7975244841, ರವರು ವೆಳ್ಳಿಯಮ್ಮ ಮನೆಯ ಹತ್ತಿರ ಶೌಚಾಲಯ ಕಟ್ಟಿರುವುದನ್ನು ತೆರವುಗೊಳಿಸುವಂತೆ ಕೋರಿದ್ದು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

ಕಾಳಪ್ಪ ಬಡಾವಣೆಯ ನಿವಾಸಿಯಾದ ಕ್ಯಾಪ್ಟನ್ ಕೃಷ್ಣಪ್ಪರವರು ಜಲಮಂಡಳಿಯವರು ವಾರದಲ್ಲಿ ಎರಡು ದಿನ ನೀರು ಬಿಡುತ್ತಿದ್ದು ಮೂರ ದಿನ ಬಿಡುವಂತೆ ಮತ್ತು ಏಳನೇ ಸಿ.ಕ್ರಾಸ್‌ನಲ್ಲಿ ಬೀದಿ ದೀಪ ದುರಸ್ಥಿ ಮಾಡಿ ಕೊಡುವಂತೆ ಕೋರಿದರು. ಸಾರ್ವಜನಿಕರು ಎಲ್ಲಾ ಕಡೆಗಳಲ್ಲಿಯೂ ವಾರಕ್ಕೆ ಎರಡು ಬಾರಿಯಷ್ಟೆ ನೀರು ಬಿಡುತ್ತಿರುವುದನ್ನು ಸಭೆಯಲ್ಲಿ ದೃಡೀಕರಿಸಿದರು.

ಕ್ರಮ: ವಾರ್ಡ್ ಅಭಿಯಂತರರು

ಎಲ್.ಬಿ.ಶಾಸ್ತ್ರಿ ನಗರದ ಶ್ರೀ.ಗಿರೀಶ್ ರವರು ಕೆಲವು ಸಮಸ್ಯೆಗಳನ್ನು ಬಿ.ಬಿ.ಎಂ.ಪಿ ಅಧಿಕಾರಿಗಳು ಪರಿಹರಿಸುತ್ತಿದ್ದು ಉತ್ತಮ ಸ್ಪಂದನೆ ಸಿಗುತ್ತಿದೆ ಇದಕ್ಕೆ ಧನ್ಯವಾದಗಳನ್ನು ತಿಳಿಸುತ್ತಿದ್ದೆನೆ ಎಂದು ಎಲ್.ಬಿ.ಶಾಸ್ತ್ರಿ ನಗರ ಪಾರ್ಕ್‌ನಲ್ಲಿ ಪೇವಿಂಗ್ ಸ್ಟೋನ್ಸ್ ಅಳವಡಿಸಿದ್ದು ಕುಸಿಯುತ್ತಿರುವುದುನ್ನು ಹಾಗೂ ಪಾರ್ಕ್ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕೋರಿದರು ಹಾಗೂ ಪ್ರಗತಿಯಲ್ಲಿರುವ ಆರ್.ಸಿ.ಸಿ.ಚರಂಡಿಯಲ್ಲಿರುವ ಸಂಪರ್ಕರಹಿತ ಕಂಬವನ್ನು ಸ್ಥಳಾಂತರಿಸುವಂತೆಯು ಕೋರಿದರು.

ರಾತ್ರಿವೇಳೆಯಲ್ಲಿ ಮಾಂಸ ತ್ಯಾಜ್ಯವನ್ನು ಎಸೆಯುವುದು ಮತ್ತು ಗಾಂಜ ಮಾರಾಟ ಚಟುವಟಿಕೆಗಳನ್ನು ನಿಯಂತ್ರಿಸಲು ಕೋರಿದರು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು,
ಲೇಕ್ಸ್ & ಪಾರ್ಕ್ ಮತ್ತು ಪೋಲಿಸ್ ಇಲಾಖೆ

ಮುಂದಿನ ಸಭೆಗೆ ಸಂಬಂಧ ಪಟ್ಟ ಅಧಿಕಾರಿಗಳನ್ನು ತಪ್ಪದೆ ಅಹ್ವಾನಿಸಿ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಕೋರಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.



Scanned with CamScanner

2. ತೋಟಗಾರಿಕೆ ಅಧೀಕ್ಷಕರು, ಬಿ.ಬಿ.ಎಂ.ಪಿ ಮಹದೇವಪುರ ವಲಯ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ವಿಜ್ಞಾನ ನಗರ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಬಿ.ಬಿ.ಎಂ.ಪಿ ಮಹದೇವಪುರ ವಲಯ
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
8. ಆರೋಗ್ಯ ಅಧಿಕಾರಿಗಳು ವಿಜ್ಞಾನ ನಗರ ವಾರ್ಡ್.
9. ಸಹಾಯಕ ನಿದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ವಿಜ್ಞಾನ ನಗರ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಷನ್ಸ್, ವಿಜ್ಞಾನ ನಗರ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ,ಆರ್.ಡಬ್ಲ್ಯೂ.ಎ ಗಳು ವಿಜ್ಞಾನ ನಗರ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.



Scanned with CamScanner